ಬಿಳಿ ಅಂಗಿ ಪಂಚೆ ಕಂಕುಳಲ್ಲಿಟ್ಕೊಂಡು ಹಣೆಯ ಗಾಯಕ್ಕೊಂದು ಕೈ ಇಟ್ಟು ಊರಿನ ಒಡೆಯರೊಬ್ಬರು ದೊಣ್ಣಗೆ ಓಡುವುದನ್ನು ಕಂಡು ಮೊದಲಿಗೆ ಹೆದರಿಕೆ ಆಯ್ತು. ಆದರೆ ಆಮೇಲೆ ಕುಂಡೆ ತೋರಿಸಿಕೊಂಡು ಊರಿಗೆ ಓಡುವ ಒಡೆಯರ ಕಂಡು ಹಳುವಿಗೆ ಮತ್ತೆರಡು ಕಲ್ಲು ಕುಟ್ಟಿ ಕುಟ್ಟಿ ನೆಗಿಯಾಡಿದನು. ಅದೇ ಹಳುವಿಂದ ತನ್ನ ಮಾಯಿ ಪಾರೋತಿ ಬಂದಾಗ ಬೇಡು ನೆಗಿ ರಪ್ಪ ನಿಂತಿತು. 'ಯಾರಿಗೂ ಹೇಳ್ ಬ್ಯಾಡ ಕುದೆ' ಅಂದೇಳಿ ಪಾರೋತಿ ಬೇಡುವನ್ನು ಕರ್ಕೊಂಡು ಬಿಡಾರಕ್ಕೆ ಬಂದಳು. ಅವನಿಗೆ ಮಾತ್ರ ಆ ಬಿಳಿ ಅಂಗಿ ಪಂಜಿ ಬಿಟ್ರೆ ಆ ದೊಣ್ ಕುಂಡಿಯೇ ನೆನಪಾಗಿ ನೆಗಿ ಮಡ್ಡಿ ಉಕ್ಕುವುದು.

ಗೊರ್ಬಿನ ಅಡಿ ನಿಂತ್ಕಂಡು 'ಮಾಯ ಹಳು' ಅಂದ. ಪಾರೋತಿ 'ನಿಂಗೆಂತ ಮರ್ಲಾ ಕುದೆ?' ಅಂತ ಮಂಡಿ ಮೇಲ್ ಹಗೂರ ತಟ್ಟದಳು. ಇಬ್ಬರಿಗೂ ನೆಗಿ ಬಂತು. 'ಮಾಯಿ ಅಳಿಯಂದೆಂತ ಗಮ್ಮತ್ತೆ?' ಎಂದ ಕರ್ಕು ಮಾತಿಗೆ 'ಮಗಿಂದು ಕುಸಾಲ್ ಮರತಿ. ಎಂತದೂ ಇಲ್ಲ ಅಕಾ. ನೆಡಿನಿ ಹ್ವಾಪ. ಸೆಣ್ಣೆ ಒಡಿಯರೆಲ್ಲ ಹ್ವಾದಂಗಾಯ್ತ್' ಎಂದು ಗಡಿಬಿಡಿ ಮಾಡಿದಳು. 'ದೋಣ್ ಕುಂಡಿ ದಪ್ಪಣ್ ಕುಂಡಿ' ಬೇಡು ಮುಖದ ತುಂಬಾ ನೆಗಿ ತುಂಬ್ಕಂಡು ಮಾಯಿಗೆ ಹಿಲಾಲ್ ಮಾಡುಕೆ ಹೊರಟದ್ದೇ 'ಯಾರ್ ಕುಂಡಿ ಕಂಡಿದೆ ಕುದೆ?' ಎಂದು ಕರ್ಕು ಕೇಂಡಳು. 'ಕುಂಡಿ ಪಂಚತಿ ಬಿಡಿ. ನೆಡಿನಿ ಹ್ವಾಪ' ಎಂಬ ಚಣ್ಣು ಮಾತಿಗೆ ಮೂರು ಗೊರ್ಬುಗಳೂ ಹಳು ಬಿಟ್ಟು ದಾರಿಗೆ ಬಂದವು.

'ಅಬಾ ನಾ ಶಾಲಿಗ್ ಹ್ವಾಪುಕಾಗ್ದಾ?'

'ಹೊಲಿಯರಿಗೆಲ್ಲ ಎಂತಾ ಶಾಲಿ ಮಗಾ? ಬನಿ ಬೇಗ್ ಬೇಗ್'

ಅಬ್ಬಿ ಹೇಳಿದ ಆ ಹೊಸ ಶಬ್ದ ಗೊರ್ಬಿನ ಮೇಲೆ ಬೀಳುವ ಮಳೆಯ ಸದ್ದು ತಿಂದು ಹಾಕಿತು. ಆ ಮಕ್ಕಳು ಹಾಕಿದ ವಸ್ತ್ರ, ಅವರ ಕೊಡೆ ಬೇಡುವಿನ ಕಣ್ ಮುಂದೆ ಚಿತ್ರಗಳಾಗಿ ನೆನಪಿನ ಕೋಣೆಗೆ ಸೇರಿಕೊಂಡವು. ಅವರ ಸವಾರಿ ಒಂದು ಮನೆಯ ಹಿತ್ತಲ ಕಡೆ ನಿಂತು 'ಒಡ್ತಿಯರೇ... ಒಡ್ತಿಯರೇ...?'ಎಂದು ಕೂಗು ಹಾಕಿತು.

ಮೊದಲ ಮನೆಯವರೇ 'ನಮ್ಗೇ ಇಲ್ಲ. ಮೂರ್ಚೇಂಜಾಪತಿಗೆ ಆ ಹಾಳ್ ಸೊಡ್ಡ್ ತಕಂಡ್ ಕಾಕಿ ಕಂಡಂಗೆ ಒರ್ಲುದ್ ಕಾಣ್. ಹೊಯ್ನಿ ಅಲ್. ಹ್ವಯ್ದಿರೆ ನಾಯಿ ಬಿಡ್ತೆ ಕಾಣಿ. ಹೆಕತಿಂಬವ್. ಹಚಾ' ಎಂದು ಜೋರು ದನಿಯಲ್ಲಿ ಕೂಗಿದರು. ಅಬ್ಬಿಯ ಗೊರ್ಬೊಳಗೇ ಇದ್ರೂ ಅಬ್ಬಿ ಆಡಿದ ಹೊಸ ಪದವನ್ನು ಕೇಳಿಸದ ಈ ಹಡಬೆ ಮಳೆ ಆ ಮನೆಯವರು ಬೈದದ್ದನ್ನ ಮಾತ್ರ ಎಲ್ಲರಿಗೂ ಸಮಾ ಕೇಳಿಸಿತು. ಅಲ್ಲಿಂದ ಮುಂದೆ ಒಂದೆರಡು ಮನೆಯವರು ಉದ್ದಿನ ದ್ವಾಸಿ, ಚೂರು ಕೋಳಿ ಗಸಿ ಕೊಟ್ಟು 'ನಮ್ಗೆ ಈ ಸಲ ಇಲ್ಲ. ಮಳೆ ಸಮಾ ಹಿಡ್ದು ಭಾರೀ ಕಷ್ಟ ಆಯ್ತ್ ಚಣ್ಣುವಾ' ಎಂದು ಮಳೆಯಲ್ಲಿ ಕೈತೊಳೆದುಕೊಂಡರು.

ಚಣ್ಣು ತಾನು ತಂದ ಗೊರ್ಬು, ಊಟ ಹೊತ್ಕಂಡು ಹ್ವಾಪುದಕ್ಕೆ ಗಣ್ಸರನ್ನು ಅರ್ಧ ದಾರಿಗೆ ಬರಲು ಹೇಳಿದ್ದು ಎಲ್ಲಾ ನೆನಪಾಯ್ತು. ಆದರೆ ಇನ್ನೂ ಮನೆಗಳಿದ್ದವಲ್ಲ. ಮುಂದಿನ ಮನೆಗಳಿಗೆ ನಡೆದರು. ಗೊರ್ಬು ತಂದಿದ್ದು ವೇಸ್ಟಾಗಲಿಲ್ಲ. ಎರಡು ಮನೆಯವರು ಕೀಳಿನ ಪೂರ್ತಿ ಎಡೆ ಕೊಟ್ಟರು. ಎಡೆಗೆ ಇಟ್ಟಿದ್ದೇನೊ. ಗೆಯ್ಸಿ (ತೆಂಗಿನಕಾಯಿ ಚಿಪ್ಪು)ಯಲ್ಲಿ ಕಳ್ಳು ಕೊಟ್ಟರು. ಅದನ್ನ ಮೂಸಿ ಕಂಡ ಚಣ್ಣು ಕುಡಿದು ಬಿಟ್ಟಳು. ಕರ್ಕು, ಪಾರೋತಿ ಕಡೆ ತಿರುಗಿ 'ಎಷ್ಟೊತ್ತಿಗೆ ಬೆಚ್ಚದ್ದೋ ಏನೋ ಹುಳಿ ಆಯ್ತ್ ಕಾಣಿ' ಅಂದು ಎಡೆಯನ್ನು ಪಾಲು ಮಾಡಿಕೊಂಡರು.

ಆ ದೊಡ್ಡ ಮನೆಯ ಹಿತ್ತಲಿಗೆ ಬಪ್ಪ ಹೊತ್ತಿಗೆ ಅವರ ಗೊರ್ಬು ಭಾರ ಆಗಿತ್ತು. 'ಒಡ್ತಿಯರೇ...' ಎಂಬ ಕೂಗಿಗೆ ಮೂರು ಎಡೆಗಳು ಹಿತ್ತಲಿಗೆ ಬಂದವು. ಹಂಗೆ ದಪ್ಪ ಒಡ್ತಿಯರು ಬಂದವರು ಎಡಕೈ ಉಗುರನ್ನ ಕಚ್ಚಿ ಥೂ ಅಂತ ಎಡೆಗೆ ಉಗಿಯಬೇಕು ಅಷ್ಟರಲ್ಲಿ ಒಡೆಯರು ಬಂದು 'ಹಾಂಗೆಲ್ಲ ಮಾಡುಕಾಗ' ಎಂದು ತಡೆದರು. ಬೇಡುಗೆ ಒಡೆಯರ ಕಂಡದ್ದೇ ನೆಗಿ ಬಂತು. ದೋಣ್ ಕುಂಡಿ ದಪ್ಪಣ್ ಕುಂಡಿ ಅವನೇ ಹೇಳಿಕೊಂಡು ನೆಗಿಯಾಡಿದ. ಒಡೆಯ ಒಡ್ತಿ ಬೆನ್ನು ಹಾಕಿದ ಮೇಲೆ ಎಡೆಯನ್ನು ಎತ್ತಿಕೊಂಡರು. ತಮ್ಮ ಗೊರಬನ್ನು ಊಟದ ಗೊರಬಿಗೆ ಮುಚ್ಚಿ ಮಗುವಿಗೆ ಗೋಣಿಚೀಲದ ಕುಪ್ಪೆ ಮಾಡಿ ಹಾಕಿಕೊಂಡು ಹೊರಟರು.

ಎಡೆ ಊಟ ಬಿಡಾರ ಮುಟ್ಟುವ ಹೊತ್ತಿಗೆ ಎಲ್ಲರ ಹೊಟ್ಟೆ ಯಾವತ್ತಿಗಿಂತ ಹೆಚ್ಚು ಹಸಿದಿತ್ತು. ಒಂದ್ ಹನಿಯೂ ಸಾರಾಯಿ ಸಿಗದೇ ಇದ್ದುದ್ದಕ್ಕೆ ಮೂರು ಜನ ಗಂಡಸಿರಿಗೆ ಅಷ್ಟಿಷ್ಟು ಬೇಜಾರಾಗಿದ್ದಲ್ಲ. ಗೊರ್ಬಿಗೆ